

ಡಾ. ಕೆ.ಎಂ. ಚೆರಿಯನ್ ಅವರ ಜೊತೆ ರೀನಾ

ಬೆಂಗಳೂರಿನ ರೀನಾ ರಾಜು ಅವರ ದೇಹದಲ್ಲಿ ಮಿಡಿಯುತ್ತಿರುವುದು ಮೂರನೇ ಹೃದಯ. ಏನೀ ಮೂರನೇ ಹೃದಯದ ಕಥೆ? ವಿಶ್ವಸಂಸ್ಥೆ ಸಹಭಾಗಿತ್ವದಲ್ಲಿ ಸ್ಥಾಪನೆಯಾದ 'ಕರ್ಮವೀರ ಚಕ್ರ' ಪುರಸ್ಕಾರ ಪಡೆದಿರುವ ರೀನಾ ಮೇಡಂ, ತಮ್ಮ 'ಹೃದಯ' ಮತ್ತು ಹೃದಯವಂತಿಕೆಯ ಕಥೆಯನ್ನು 'ಸುಧಾ' ಓದುಗರಿಗಾಗಿ ಹಂಚಿಕೊಂಡಿದ್ದಾರೆ.

■ ನಿರೂಪಣೆ:
**ರಾಘವೇಂದ್ರ ಕೆ. ತೊಗರ್ಸಿ**

# ಮಿಡಿದ ಹೃದಯಗಳು

ನಾನು ರೀನಾ ರಾಜು, ನನಗೀಗ 42ರ ಪ್ರಾಯ. ಬೆಂಗಳೂರಿನ ಹುಡುಗಿ. ಬಾಲ್ಯದಿಂದಲೂ ಓದಿನ ಜೊತೆ ಸಂಗೀತ ಮತ್ತು ಕ್ರೀಡೆ ನನ್ನ ಸಂಗಾತಿಗಳಾಗಿದ್ದವು. ಹಾಕಿಯಲ್ಲಿ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದೆ. ಅಥ್ಲೀಟ್ ಆಗಿದ್ದ ನಾನು ಅನೇಕ ಮ್ಯಾರಥಾನ್‌ಗಳಲ್ಲಿ ಗುರಿಮುಟ್ಟಿದ್ದೇನೆ. ಉತ್ಸಾಹದ ಚಿಲುಮೆಯಂತಿದ್ದ ನಾನು 25 ವರ್ಷದವಳಿದ್ದಾಗ (2006ರಲ್ಲಿ) ಹೃದಯ ವೈಫಲ್ಯಕ್ಕೆ ತುತ್ತಾದೆ. ಅದನ್ನು 'ಕಾರ್ಡಿಯೊ ಮಯೋಪತಿ' ಎನ್ನುತ್ತಾರೆ. ಆ ಸಮಯದಲ್ಲಿ ನನ್ನ ಹೃದಯ ಶೇ. 15ರಷ್ಟು ಮಾತ್ರ ಕೆಲಸ ಮಾಡುತ್ತಿತ್ತು.

ಫಿಟ್ ಆಗಿ ಆರೋಗ್ಯವಂತಳಾಗಿದ್ದೆ. ಒಮ್ಮೆ ನೆಗಡಿಯಾಗಿ ಜ್ವರ ಬಂತು. ಅದು ನನ್ನ ಹೃದಯವನ್ನೂ ಕಿತ್ತುಕೊಂಡಿತ್ತು. ಅದು ಹೇಗಾಯಿತು ಎನ್ನುವುದು ನಿಗೂಢ. ಚಿಕ್ಕವಯಸ್ಸಿನಲ್ಲಿ ಹೃದಯ ವೈಫಲ್ಯ ಎನ್ನುವುದನ್ನೇ ಅದುವರೆಗೆ ನಾನು ಕೇಳಿರಲಿಲ್ಲ. ವೈದ್ಯರು ಚಿಕಿತ್ಸೆ ಆರಂಭಿಸಿದರು. ಕ್ರೀಡಾ ಮನೋಭಾವದ ನಾನು ಬದುಕನ್ನು ಗೆಲ್ಲಲು ಪಣತೊಟ್ಟೆ. ಜೀವನಶೈಲಿ ಬದಲಿಸಿಕೊಂಡೆ.

ನಾಲ್ಕು ವರ್ಷ ಚಿಕಿತ್ಸೆಯ ಬಲದಿಂದಲೇ ಹೃದಯವನ್ನು ಕಾಪಾಡಿಕೊಂಡೆ. ನಿರಂತರ ಚಿಕಿತ್ಸೆಯ ಓಡಾಟದಲ್ಲಿ ಕ್ಷಣಕ್ಷಣವೂ ಯುಗಗಳಂತೆ ಭಾಸವಾಗುತ್ತಿದ್ದವು. ಇದ್ದಕ್ಕಿದ್ದಂತೆ ಕೆಲವೊಮ್ಮೆ ಉಸಿರಾಟ ನಿಂತು ಸಾವಿನ ಅನುಭವ ಆಗುತ್ತಿತ್ತು.

**ಅಂಗಾಂಗ ರೋಗಿಗಳ ಪಾಲಿನ ಜೀವಸೆಲೆಯಾಗಿ ನಿಂತ ಮೂರನೇ ಹೃದಯ**

ಸ್ವಲ್ಪ ದೂರದ ನಡಿಗೆಗೂ ಸುಸ್ತಾಗುತ್ತಿದ್ದೆ. ಮಿತ ಆಹಾರ, ಕಾಫಿ, ಟೀ, ಸಾರು, ರಸಂ ಸೇರಿದಂತೆ ನೀರನ್ನು ದಿನಕ್ಕೆ ಕೇವಲ ಒಂದು ಲೀಟರ್ ಕುಡಿಯಬೇಕಿತ್ತು. ಅಂತಹ ಸ್ಥಿತಿಯಲ್ಲೂ ಹಾಸಿಗೆಯಲ್ಲೇ ಸಣ್ಣಪುಟ್ಟ ಪದ್ಯ ಹಾಡುತ್ತಿದ್ದೆ. ಆಗಾಗ ಚರ್ಚ್‌ಗಳಲ್ಲಿ ಹಾಡುತ್ತಿದ್ದೆ. ಹಾಸಿಗೆಯಲ್ಲೇ ಕುಳಿತು ಪ್ರಾರ್ಥನೆ ಮಾಡುತ್ತಿದ್ದೆ. ಸಾವು ಅಥವಾ ಹೊಸಹುಟ್ಟು – ಯಾವುದು ಬರುವುದೋ ಅದನ್ನು ಅಪ್ಪಿಕೊಳ್ಳಲು ತಯಾರಾಗಿದ್ದೆ.

2009ರ ಆರಂಭದಲ್ಲಿ ನನಗೆ ಕೊಟ್ಟ ಔಷಧಗಳು ಕೆಲಸ ಮಾಡುತ್ತಿಲ್ಲ ಎಂದು ಗೊತ್ತಾಯಿತು. ಔಷಧೋಪಚಾರದಿಂದ ಶೇ.30ರಷ್ಟು ವೃದ್ಧಿಯಾಗಿದ್ದ ಹೃದಯದ ಕಾರ್ಯಕ್ಷಮತೆ ಕಡಿಮೆ ಆಗಿತ್ತು. ಚಿಕಿತ್ಸೆ ನೀಡುತ್ತಿದ್ದ ಬೆಂಗಳೂರಿನ ವೈದ್ಯರು ಹೃದಯ ಕಸಿ ಅನಿವಾರ್ಯ ಅಂದರು. ಕಿಡ್ನಿ, ಕಣ್ಣಿನ ದಾನ ಕೇಳಿದ್ದ ನಾನು ಹೃದಯ ದಾನ ಪಡೆಯುವುದು ಸಾಧ್ಯವೇ ಎಂದು ಅಚ್ಚರಿಗೊಂಡೆ. ಅದು ಸುಲಭದ ಕೆಲಸ ಆಗಿರಲಿಲ್ಲ. ನಮ್ಮ ಮನೆಯವರು ಹೃದಯ ಕಸಿಗಾಗಿ ಹೆಸರು ನೋಂದಾಯಿಸಿದರು. ವೈದ್ಯರು ನನ್ನ ಹೃದಯಕ್ಕೆ ಆರು ತಿಂಗಳು ಮಾತ್ರ ಲೈಫ್ ಎಂದಿದ್ದರು. ಆ ಅವಧಿಯಲ್ಲಿ ಯಾವ ಆಶಾದಾಯಕ ಪ್ರಗತಿ ಸಾಧ್ಯ ಆಗಲೇ ಇಲ್ಲ. ಅಂಗದಾನದ ಬಗ್ಗೆ ನಮ್ಮಲ್ಲಿ ಇರುವ ಅಜ್ಞಾನವೇ ಇದಕ್ಕೆ ಕಾರಣ ಎಂದು ಗೊತ್ತಾಯಿತು. ಅಂಗಾಂಗ ದಾನದ ಮಹತ್ವ ನಮಗೂ ಅರಿವಾಯಿತು. ಆಗಲೇ ನಮ್ಮ ಕುಟುಂಬದ ಎಲ್ಲರೂ ಅಂಗಾಂಗ ದಾನಕ್ಕೆ ಬದ್ಧರಾದೆವು.

## ಮಿಡಿಯಿತು ದಾನಿಯ ಹೃದಯ

ಚೆನ್ನೈಯಲ್ಲಿ 'ಫ್ರಂಟೈರ್ ಲೈಫ್‌ಲೈನ್ ಆಸ್ಪತ್ರೆ'ಯಲ್ಲಿ ಅಂಗಾಂಗ ಶಸ್ತ್ರಚಿಕಿತ್ಸೆ ಮಾಡುತ್ತಾರೆ. ಅಲ್ಲಿ ಹಾರ್ಟ್ ಸರ್ಜನ್ ಚೆರಿಯನ್ ಇದ್ದಾರೆ ಎನ್ನುವುದು ಗೊತ್ತಾಯಿತು. ಅವರನ್ನು ಭೇಟಿಯಾದೆವು. ಅಂಗಾಂಗ ದಾನ ಪಡೆಯಲು ಸೆಪ್ಟೆಂಬರ್ 2009ರಲ್ಲಿ ತಮಿಳುನಾಡಿನಲ್ಲಿ ನೋಂದಣಿ ಮಾಡಿಸಿದೆವು. ನವೆಂಬರ್‌ನಲ್ಲಿ ಕರೆ ಬಂತು. ದೇವರನ್ನು ಪ್ರಾರ್ಥಿಸುತ್ತಾ ಆಸ್ಪತ್ರೆಗೆ ಹೋದೆ. ಆಸ್ಟ್ರೊನಾಟ್ ರೀತಿ ಡ್ರೆಸ್ ಮಾಡಿ ಅನಸ್ತೇಷಿಯಾ ಕೊಟ್ಟರು. ಸ್ವಲ್ಪ ಹೊತ್ತಿಗೆ ನಿನ್ನ ಹೃದಯ ಶಸ್ತ್ರಚಿಕಿತ್ಸೆ ಆಯಿತು ಎಂದರು. ದಾದಿಯೊಬ್ಬರು ನನಗೆ ದೊಡ್ಡ ಬೌಲ್‌ನಲ್ಲಿ ಸೂಪ್ ತಂದು ಕುಡಿಯಲು ಕೊಟ್ಟರು. ಈ ಪ್ರಮಾಣದ